

ಸುನಂದಾ ಕಡಮೆ

ಕಲೆ: ಸಂತೋಷ್ ಸಸಿಹಿತ್ಲು

# ಮಶೀನಣ್ಣ ಜನಿಸಿದ ಕಥೆ

ನಮ್ಮ ಧರ್ಮನಿಗೆ ಬೇಸಿಗೆ ರಜೆಯ ದಿನಗಳು. ಅಜ್ಜಿಯಂತೂ ಧರ್ಮ ಬರುವುದನ್ನೇ ಕಾಯುತ್ತಿದ್ದಳು. ಈ ಸಲ ಧರ್ಮ ಊರಿಗೆ ಬಂದಾಗ ಅಜ್ಜಿ ಸ್ವಲ್ಪ ನಿಶ್ಯಕ್ತಿಯಾದದ್ದನ್ನು ಗಮನಿಸಿದ.

‘ಅಜ್ಜೀ, ಇಲ್ಲಿ ಒಬ್ಬಳೇ ಯಾಕಿರುತ್ತೀ? ನಾನು ರಜೆ ಮುಗಿಸಿ ಹೋಗುವಾಗ ಈ ಸಲ ನನ್ನ ಜೊತೆಗೇ ಬಂದುಬಿಡು’ ಅಂತ ಮುದ್ದಾಗಿಯೇ ಒತ್ತಾಯಿಸಿದ. ಅಜ್ಜಿ ಅದಕ್ಕೆ ‘ಇಲ್ಲಪ್ಪ, ನನಗೆ ನಿಮ್ಮ ಪಟ್ಟಣ ಎಂದರೆ ಭಯ, ನಿನ್ನ ಅಪ್ಪ- ಅಮ್ಮ ಇಬ್ಬರೂ ಹೊರಗೆ ದುಡಿಯಲು ಹೋಗುವವರು. ಅಲ್ಲಿ ನನಗೆ ಮಾಡಲು ಕೆಲಸವೂ ಇಲ್ಲ, ತಿರುಗಾಡಿಕೊಂಡಿರಲು ಜಾಗವೂ ಇಲ್ಲ’ ಅಂತ ತೊಳೆಯುವ ಬಟ್ಟೆಗಳನ್ನು ಬಕೇಟಿನಲ್ಲಿ ನೆನೆ ಹಾಕುತ್ತ ಹೇಳಿದಳು.

‘ಅಲ್ಲಿ ಸಮೀಪದಲ್ಲಿ ಒಂದು ಗಾರ್ಡನ್ ಉಂಟು, ನಾನು ನಿನ್ನನ್ನು ತಿರುಗಾಡಲು ಕರೆದೊಯ್ಯುವೆ’ ಅಂತ ಧರ್ಮ ಮತ್ತೆ ಗೋಗರೆದ.

‘ನಿನ್ನ ಭೀಮಜಿ ದೊಡ್ಡಪ್ಪನೂ ಹೀಗೇ ಕರೆದ, ಬಂದು ನಮ್ಮೊಂದಿಗೆ ಇದ್ದುಬಿಡು ಅಂತ, ಈ ವಯಸ್ಸಿನಲ್ಲಿ ಅದೆಲ್ಲ ಆಗದ ಮಾತು’ ಅನ್ನುತ್ತ ಬಟ್ಟೆ ತೊಳೆಯಲೆಂದು ಬಾವಿಯ ಬಳಿ ನಡೆದಳು.

‘ನೀನು ಯಾವಾಗಲೂ ಹೀಗೇ, ಇಷ್ಟು ದೂರದಲ್ಲಿ ಒಬ್ಬಳೇ ಇರುತ್ತೀ, ಬಾ ಅಂದರೆ ನಿಂದೇ ಏನೋ ಒಂದು

